ಕರ್ನಾಟಕ ಸರಕಾರ
ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ: 23-1-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **Natural Selection<br>by<br>Prof: K.N. Ganeshaiah,<br>University of Agricultural Sciences, Bangalore<br>Prof : U.R. Rao,<br>Chairman BASE and Chairman PRL Council** | **24-1-2015<br>Saturday<br>at<br>10-30 a.m.** | **Jawaharlal Nehru Planetarium<br>T. Chowdaiah Road,<br>High Grounds,<br>Bangalore-560 001** |
| 2 | ಕನ್ನಡದಲ್ಲಿ ತೀರ್ಪು ನೀಡಿದ ನ್ಯಾಯಮೂರ್ತಿಗಳಿಗೆ ಗೌರವ ಸಮರ್ಪಣೆ ಸಮಾರಂಭ:<br>ಉದ್ಘಾಟನೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br><br>ಅಧ್ಯಕ್ಷತೆ:<br>ಶ್ರೀ ಕೆ.ಎಲ್. ಮಂಜುನಾಥ್,<br>ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳು<br><br>ಮುಖ್ಯ ಅತಿಥಿಗಳು:<br><br>ಶ್ರೀ ಟಿ.ಬಿ. ಜಯಚಂದ್ರ,<br>ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು<br>ಶ್ರೀ ಆರ್. ರೋಷನ್ ಬೇಗ್,<br>ಮೂಲ ಸೌಲಭ್ಯ ಅಭಿವೃದ್ಧಿ , ವಾರ್ತಾ ಹಾಗೂ ಹಜ್ | 24-1-2015<br>ಶನಿವಾರ<br>ಬೆಳಗ್ಗೆ<br>10-30 ಗಂಟೆಗೆ | ಬ್ವಾಂಕ್ವೆಟ್ ಹಾಲ್<br>ವಿಧಾನ ಸೌಧ,<br>ಬೆಂಗಳೂರು |

| | | | |
|---|---|---|---|
| | ಖಾತೆ ಸಚಿವರು | | |
| 3 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಪತ್ರಿಕೋದ್ಯಮ ಪದವೀಧರರು/ವಿದ್ಯಾರ್ಥಿಗಳಿಗೆ ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿ<br>ಉದ್ಘಾಟನೆ:<br>ಶ್ರೀ ಎಸ್.ವಿ. ಜಯಶೀಲರಾವ್,<br>ಹಿರಿಯ ಪತ್ರಕರ್ತರು,<br>ವಿಷಯ ಪ್ರವೇಶ ಭಾಷಣ:<br>ಶ್ರೀ ಇಂದೂಧರ ಹೊನ್ನಾಪುರ<br>ಹಿರಿಯ ಪತ್ರಕರ್ತರು ಹಾಗೂ ದಲಿತಪರ ಹೋರಾಟಗಾರರು | 24–1–2015<br>ಶನಿವಾರ<br>ಅಪರಾಹ್ನ<br>12–00 ಗಂಟೆಗೆ | ಸುಲೋಚನಾ ಸಭಾಂಗಣ,<br>ವಾರ್ತಾ ಸೌಧ,<br>ಭಗವಾನ ಮಹಾವೀರ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಸಮಾಜ ಕಲ್ಯಾಣ ಸಚಿವರ ಗ್ರಾಮ ವಾಸ್ತವ್ಯ

**ಬೆಂಗಳೂರು, ಜ. 23 (ಕನಾ�ಟಕ ವಾತೆ�) :**

ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಜನವರಿ 31 ರಂದು ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ದೊಡ್ಡ ರೇಷ್ಮೆ ಹಡ್ಲು ಗಿರಿಜನ ಹಾಡಿಗಳಿಗೆ ಭೇಟಿ ನೀಡಿ ಅವರ ಕುಂದು ಕೊರತೆಗಳ ಬಗ್ಗೆ ಸಭೆ ನಡೆಸಿ ಸ್ಥಳದಲ್ಲಿಯೇ ಪರಿಹಾರ ಸೂಚಿಸುವರು. ಅಂದು ದೊಡ್ಡ ರೇಷ್ಮೆ ಹಡ್ಲುವಿನಲ್ಲಿಯೇ ರಾತ್ರಿ ಗ್ರಾಮ ವಾಸ್ತವ್ಯ ಮಾಡುವರು. ಜನವರಿ 31 ರಂದು ಬುಡಕಟ್ಟು ಜನರಿಗಾಗಿ ಇರುವ ಯೋಜನೆಗಳ ಸಂಬಂಧ ಸೌಲಭ್ಯಗಳನ್ನು ವಿತರಿಸುವರು.

**ಬಾಬು/ಕೆಎಂ**

## ಡಿಪ್ಲೋಮೊ ಫಲಿತಾಂಶ

**ಬೆಂಗಳೂರು, ಜನವರಿ 23 (ಕರ್ನಾಟಕ ವಾರ್ತೆ):**

2014 ರ ನವೆಂಬರ್/ಡಿಸೆಂಬರ್ ತಿಂಗಳಲ್ಲಿ ನಡೆದ ತಾಂತ್ರಿಕ ಪರೀಕ್ಷಾ ಮಂಡಳಿಯ ಡಿಪ್ಲೋಮಾ ಪರೀಕ್ಷೆಗಳ ಫಲಿತಾಂಶಗಳನ್ನು ಜನವರಿ 24 ರಂದು ರಾಜ್ಯದ ಎಲ್ಲ ಪಾಲಿಟೆಕ್ನಿಕ್‌ಗಲ್ಲಿ ಮಧ್ಯಾಹ್ನ 1–00 ಗಂಟೆಗೆ ಪ್ರಕಟಿಸಲಾಗುವುದು. ಪರೀಕ್ಷಾ ಫಲಿತಾಂಶವು ಅಂತರ್ಜಾಲ ತಾಣ www.btekarlinx.net,

http://www.dtd.kar.nic.in, www.shimoga.net, www.schools9.com, www.exametc.com ಮತ್ತು www.indiaresults.com ನಲ್ಲಿ ಲಭ್ಯವಿರುತ್ತದೆ.
ಬಾಬು/ಕೆಎಂ

## ಫಲಿತಾಂಶ ಪ್ರಕಟ

ಬೆಂಗಳೂರು, ಜನವರಿ 23 (ಕರ್ನಾಟಕ ವಾರ್ತೆ):

ರಾಷ್ಟ್ರೀಯ ಶಿಶಿಕ್ಷು ತರಬೇತಿ ಯೋಜನೆಯಡಿ ಅಕ್ಟೋಬರ್ 2014 ರಲ್ಲಿ ರಾಜ್ಯದ 17 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಅಖಿಲ ಭಾರತ ವೃತ್ತಿ ಪರೀಕ್ಷೆ (ಶಿಶಿಕ್ಷು) ಯ ಪರೀಕ್ಷಾ ಫಲಿತಾಂಶವನ್ನು ಸಂಬಂಧಪಟ್ಟ ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ವಿಭಾಗೀಯ ಕಛೇರಿಗಳಲ್ಲಿ ದಿನಾಂಕ 24-1-2015 ರಂದು ಅಪರಾಹ್ನ 4.00 ಘಂಟೆಗೆ ಪ್ರಕಟಿಸಲಾಗುವುದು. ಅಂಕಪಟ್ಟಿಗಳನ್ನು ಪಡೆಯಲು ದಿನಾಂಕ 10-2-2015 ರ ನಂತರ ಆಯಾ ಪರೀಕ್ಷಾ ಕೇಂದ್ರಗಳ ಪ್ರಾಚಾರ್ಯರನ್ನು ಸಂಪರ್ಕಿಸಬಹುದು. ದಿನಾಂಕ 23-1-2015 ರಂದು ಅಪರಾಹ್ನ 4.00 ಗಂಟೆಗೆ ಫಲಿತಾಂಶವು ಇಂಟರ್‌ನೆಟ್‌ನಲ್ಲೂ ಸಹ ಲಭ್ಯವಿರುತ್ತದೆ. www.emptrg.kar.nic.in
ಬಾಬು/ಕೆಎಂ

## ಸಚಿವರ ಪ್ರವಾಸ

ಬೆಂಗಳೂರು, ಜನವರಿ 23 (ಕರ್ನಾಟಕ ವಾರ್ತೆ):

ಪೌರಾಡಳಿತ, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಸಚಿವ ಡಾ: ಖಮರುಲ್ ಇಸ್ಲಾಂ ಅವರು ಜನವರಿ 24 ರಿಂದ 27 ರವರೆಗೆ ಕಲಬುರಗಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

## ಕರ್ನಾಟಕದಲ್ಲಿ ಅತಿ ಹೆಚ್ಚು ಹುಲಿ

ಬೆಂಗಳೂರು, ಜನವರಿ 23 (ಕರ್ನಾಟಕ ವಾರ್ತೆ):

ಹುಲಿಯ ಸಂಖ್ಯೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲ ಸ್ಥಾನಗಳಿಸಿದೆ ಎಂದು ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರಾದ ಶ್ರೀ ರಮಾನಾಥ ರೈ ತಿಳಿಸಿದರು.

ಅವರು ಇಂದು ತಮ್ಮ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಇತ್ತೀಚಿನ ಹುಲಿ ಗಣತಿ ಫಲಿತಾಂಶವನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ಅರಣ್ಯ ಮಂತ್ರಾಲಯ ನವದೆಹಲಿ ಇವರು ಘೋಷಿಸಿದ್ದು, ಅದರಂತೆ ಕರ್ನಾಟಕದಲ್ಲಿ ಅಂದಾಜು 406 ಹುಲಿಗಳಿದ್ದು, ದೇಶದಲ್ಲೇ ಹುಲಿಗಳ ಸಂಖ್ಯೆಯಲ್ಲಿ ಪ್ರಥಮ ಸ್ಥಾನಗಳಿಸಿದೆ ಎಂದು ಅವರು ತಿಳಿಸಿದರು.

ರಾಜ್ಯದಲ್ಲಿ ಹುಲಿ ಸಂರಕ್ಷಿತ ಪ್ರದೇಶಗಳಾದ ಬಂಡೀಪುರ (872.24 ಚ.ಕೀ.ಮೀ) ನಾಗರಹೊಳೆ (643.39 ಚ.ಕಿ.ಮೀ.) ಭದ್ರಾ (500.16 ಚ.ಕಿ.ಮೀ.) ಅಣಶಿ–ದಾಂಡೇಲಿ (1303.75 ಚ.ಕೀ.ಮೀ) ಮತ್ತು ಬಿಳಿಗಿರಿ ರಂಗನಬೆಟ್ಟ ಬಿ.ಆರ್.ಟಿ. (539.52 ಚ.ಕಿ.ಮೀ) ಒಳಗೊಂಡಂತೆ ಒಟ್ಟು 9,329.87 ಚ.ಕಿ.ಮೀ. ರಕ್ಷಿತ ಪ್ರದೇಶವಿದ್ದು, ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಕಾವೇರಿ, ಮಲೈಮಹದೇಶ್ವರ, ಮೂಕಾಂಬಿಕ, ಸೋಮೇಶ್ವರ, ಬ್ರಹ್ಮಗಿರಿ, ಪುಷ್ಪಗಿರಿ, ತಲಕಾವೇರಿ ಹಾಗೂ ಭೀಮಗಡ ವನ್ಯದಾಮಗಳಲ್ಲಿಯೂ ಹಾಗೂ ರಕ್ಷಿತ ಪ್ರದೇಶವಲ್ಲದೇ ಕಾಯ್ದಿಟ್ಟ ಅರಣ್ಯ ಪ್ರದೇಶಗಳಲ್ಲಿಯೂ ಸಹ ಹುಲಿಗಳಿರುತ್ತವೆ.

2006 ರಲ್ಲಿ 209, 2010 ರಲ್ಲಿ 300 ಮತ್ತು 2013 –2014 ರ ಗಣತಿ ಪ್ರಕಾರ 406 ಹೀಗೆ ಕೇವಲ ನಾಲ್ಕು ವರ್ಷಗಳಲ್ಲಿ ಹುಲಿಗಳ ಸಂಖ್ಯೆ ಶೇ. 35% ರಷ್ಟು ಏರಿಕೆಯಾಗಿದ್ದು, ಕರ್ನಾಟಕ ರಾಜ್ಯವು ಉತ್ತಮ ಅಂತರದಲ್ಲಿ ಮೊದಲನೇ ಸ್ಥಾನವನ್ನು ಉಳಿಸಿಕೊಂಡಿದೆ ಎಂದರು.

ರಾಜ್ಯದಲ್ಲಿ ಹುಲಿಗಳು ಸಂರಕ್ಷಣೆಗಾಗಿ ಹುಲಿ ರಕ್ಷಣಾ ದಳಗಳ ಸ್ಥಾಪನೆ, ಮಳೆಗಾಲದಲ್ಲಿ ವಿಶೇಷ ಗಸ್ತು ತಿರುಗುವಿಕೆ, ಕಳ್ಳಬೇಟೆ ತಡೆ ಶಿಬಿರಗಳ ಸ್ಥಾಪನೆ ಹಾಗೂ ನಿರ್ವಹಣೆ, ರಸ್ತೆಗಳ ಅಭಿವೃದ್ಧಿ, ನಿಸ್ತಂತು/ಆಧುನಿಕ ಉಪಕರಣಗಳ ಮತ್ತು ವಾಹನಗಳ ಬಳಕೆ ಮಾಡಲಾಗಿದೆ. ಬೆಂಕಿಯಿಂದ ರಕ್ಷಣೆ, ವನ್ಯಪ್ರಾಣಿಗಳಿಗೆ ನೀರು ಪೂರೈಕೆಗಾಗಿ ಕೆರೆಗಳ ನಿರ್ಮಾಣ/ನಿರ್ವಹಣೆ, ರಕ್ಷಿತ ಪ್ರದೇಶ ಪ್ರದೇಶಗಳ ವ್ಯಪ್ತಿಯಲ್ಲಿ ಮೊಗಸಾಲೆಗಳ ಸಂಪರ್ಕ ಕಲ್ಪಿಸಿ ಸಂರಕ್ಷಿತ ಪ್ರದೇಶಗಳನ್ನು ಬಲವರ್ಧನೆಗೊಳಿಸಲಾಗುತ್ತಿದೆ ಎಂದರು

ವನ್ಯಜೀವಿ ಹಾವಳಿ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಪ್ರದೇಶಗಳಲ್ಲಿ ಅವಶ್ಯಕತೆಗನುಗುಣವಾಗಿ ವನ್ಯಪ್ರಾಣಿಗಳನ್ನು ಹಿಮ್ಮೆಟ್ಟಿಸುವ ತಂಡ (Anti Depredation Camp) ಗಳನ್ನು ರಚಿಸಿ ವನ್ಯಜೀವಿಗಳ ಹಾವಳಿ ನಿಯಂತ್ರಿಸಲಾಗುತ್ತಿದೆ. ವನ್ಯಜೀವಿ ಹಾವಳಿ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಪ್ರದೇಶಗಳಲ್ಲಿ ತುರ್ತಾಗಿ ಪರಿಸ್ಥಿತಿಯನ್ನು ನಿಭಾಯಿಸಲು ಕ್ಷಿಪ್ರ ಸ್ಪಂದನ ತಂಡ (Rapid Response Teams)ಗಳನ್ನು ಸ್ಥಾಪಿಸಿ, ಕಾಡಾನೆ/ವನ್ಯಪ್ರಾಣಿಗಳ ಹಾವಳಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಕಾಲಕಾಲಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ವನ್ಯಪ್ರಾಣಿ ಹಾವಳಿ ಕಂಡುಬಂದಾಗ ಕೂಡಲೇ ಕ್ರಮ ಕೈಗೊಳ್ಳುವ ಸಂಬಂಧ ಕೇಂದ್ರ ಸ್ಥಾನದಲ್ಲಿ 24 ಗಂಟೆಗಳ ಕಾಲ ಸೇವೆ ಒದಗಿಸುವ ಸಲುವಾಗಿ ಶುಲ್ಕ ರಹಿತ ಸೇವಾ ಸಂಖ್ಯೆ (Toll Free Number 1800 –425–1214) ನ್ನು ಅನುಷ್ಠಾನಗೊಳಿಸಲಾಗಿದೆ ಎಂದರು.

ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಮತ್ತು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಒಳಗಡೆ ವಾಸಿಸುತ್ತಿರುವ ಕುಟುಂಬಗಳನ್ನು ಗಿರಿಜನರನ್ನೊಳಗೊಂಡಂತೆ ರಕ್ಷಿತ ಪ್ರದೇಶಗಳಿಂದ ಹೊರಗಡೆ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಾಗುತ್ತಿದೆ. ವನ್ಯಪ್ರಾಣಿಗಳ ಬಗ್ಗೆ ಪ್ರಚಾರ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳಾದ ಸೌರಶಕ್ತಿ ದೀಪ, ಹೊಗೆ ರಹಿತ ಒಲೆಗಳ ವಿತರಣೆ ಮತ್ತು ಅಡಿಗೆ ಅನಿಲ ಸಂಪರ್ಕ ಇತ್ಯಾದಿಗಳನ್ನು ಕಲ್ಪಿಸಲಾಗುತ್ತಿದೆ. ಆಲ್ ಇಂಡಿಯಾ ರೇಡಿಯೋ ಮುಖಾಂತರ ಸಹ ಅರಣ್ಯಾಧಿಕಾರಿಗಳೊಂದಿಗೆ ಮಾನವ–ವನ್ಯಜೀವಿ ಸಂಘರ್ಷಣೆ ಕುರಿತು ಸಂದರ್ಶನ ಕಾರ್ಯಕ್ರಮ ನಡೆಸುವುದರಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದರು.

ಮುಂದುವರೆದು, ವನ್ಯಜೀವಿ ಘಟಕ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿ ಐದು ವರ್ಷ ವರ್ಗಾವಣೆ ಮಾಡುವಂತಿಲ್ಲ ಮತ್ತು ವಲಯ ಅರಣ್ಯಾಧಿಕಾರಿ, ಉಪ ವಲಯ ಅರಣ್ಯಾಧಿಕಾರಿ, ಅರಣ್ಯ ರಕ್ಷಕರು ಮತ್ತು ವೀಕ್ಷಕರಿಗೆ ಮಾಹೆಯಾನ ವಿಶೇಷ ಭತ್ಯೆಯನ್ನು ನೀಡುವ ಸಂಬಂಧ ಈಗಾಗಲೇ ರಾಜ್ಯ ವನ್ಯಜೀವಿ ಮಂಡಳಿಯಲ್ಲಿ ಅನುಮೋದನೆಯಾಗಿದ್ದು, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು,

ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಯ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಹಂತದಲ್ಲಿದೆ.ಇಲಾಖೆಯಲ್ಲಿ ಖಾಲಿ ಇರುವ ಮುಂಚೂಣಿ ಸಿಬ್ಬಂದಿಯ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ 110 ಸಂಖ್ಯೆ ವಲಯ ಅರಣ್ಯಾಧಿಕಾರಿಗಳು, 113 ಸಂಖ್ಯೆ, ಉಪ ವಲಯ ಅರಣ್ಯಾಧಿಕಾರಿಗಳು, 329 ಸಂಖ್ಯೆ ಅರಣ್ಯ ರಕ್ಷಕರು ಮತ್ತು 282 ಸಂಖ್ಯೆ ಅರಣ್ಯ ವೀಕ್ಷಕರನ್ನು ನೇಮಕ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಮುಖ್ಯ ವನ್ಯ ಸಂರಕ್ಷನಾಧಿಕಾರಿ(ವನ್ಯಜೀವಿ) ವಿನಯ್ ಲೂತ್ರಾ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜಿ.ವಿ.ಸುಗೂರ್ ಉಪಸ್ಥಿತರಿದ್ದರು

ಕವನ